**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2019–20** **ದಿನಾಂಕ: 31–08–2019**

**ಪತ್ರಿಕಾ ಆಮಂತ್ರಣ**

**ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ–2020**

**1) ಮತದಾರರ ಪಟ್ಟಿಯ ಪರಿಶೀಲನಾ ಕಾರ್ಯಕ್ರಮ ಉದ್ಘಾಟನೆ.**
ಮುಖ್ಯ ಅತಿಥಿಗಳು :ಶ್ರೀ ಉಮೇಶ್ ಸಿನ್ಹಾ
ಹಿರಿಯ ಉಪ ಚುನಾವಣಾ ಆಯುಕ್ತರು, ಭಾರತ ಚುನಾವಣಾ ಆಯೋಗ.
ಶ್ರೀ ಸಂಜೀವ್ ಕುಮಾರ್
ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ.
**ದಿನಾಂಕ: 01–09–2019 ಭಾನುವಾರ, ಸಮಯ: ಮಾಧ್ಯಾಹ್ನ 01.00 ಗಂಟೆ**
**ಸ್ಥಳ:** ಮಹಾತ್ಮ ಗಾಂಧಿ ಮಾಧ್ಯಮ ಕೇಂದ್ರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಭಗವಾನ್ ಮಹಾವೀರ ರಸ್ತೆ(ಇನ್ಫೆಂಟ್ರಿ ರಸ್ತೆ), ಬೆಂಗಳೂರು–560001

## Curtain Raiser

2) 4 th general Assembly of A-WEB
(Association of Word Election Bodies) & International Conference.

**Chief Guest:**
Mr.Yong-hi Kim
The Secretary General of A-WEB.

Mr.Umesh Sinha, Senior Deputy Election Commissioner
Mr.Sanjeev Kumar, CEO, Karnataka

Date:01-09-2019 Sunday Time: 3.00 pm

Venue:Shangri-La Hotel, Vasanth Nagar, Bengaluru.

(**<u>Press Note)</u>**

## TOUR PROGRAMME

**Karnataka information**:–

Tour programme of Justice Subhash B.Adi (Former Judge of High court of Karnataka and Upa Lokayukta, Government of Karnataka) and presently Chairperson National Green Tribunal State Level Committee, Karnataka.

| Date | From | To | Mode of Journey | Remarks |
|---|---|---|---|---|
| 01-09-2019 | Bengaluru (10.30 AM) | Hubli (4.30 PM) | By Road (KA-03 ML 4859 | Visit to Guest house |
| 01.09.2019 | Hubli (5.00 PM) | Sankeshwar (7.30 PM) | By Road (KA-03 ML 4859) | Stay at Guest House |
| 02-09.2019 | Sankeshwar (6.30 PM) | Belagavi (9.30 PM) | By Road (KA-03 ML 4859) | Stay at Guest House |

| | | | | |
|---|---|---|---|---|
| 03.09.2019 | Belagavi (10.30 AM to 12.50 PM) | | | **Belagavi Sub Division** Meeting with DLC and other concerned departments/ULBs as mentioned in meeting notice. |
| 03-.9-2019 | LUNCH (1.00 PM to 1.50 PM) | | | |
| 03.9.2019 | Belagavi (2.00 PM to 4.00 PM) | | | **Chikkodi Sub division** Meeting with concerned departments/ULBs as mentioned in meeting notice. |
| 03.09.2019 | Belagavi (4.00 PM to 4.30 PM) | | | a. Press conference<br>b. Visit to nearest landfill site,CBMTDF,MSW processing facility and Hospitals. |
| 04.09.2019 | Belagavi (9.30 AM) | Bengaluru (4.30 PM) | By road (KA-03 ML 4859) | Return to Bengaluru |

**<u>ಪತ್ರಿಕಾ ಪ್ರಕಟಣೆ</u>**

## <u>ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ</u>

**ಬೆಂಗಳೂರು, ಆಗಸ್ಟ 31 ( ಕರ್ನಾಟಕ ವಾರ್ತೆ ) :**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 01–09–2019** ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು

ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.
2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 8.00 ಗಂಟೆಯಿಂದ ಬೆಳಿಗ್ಗೆ 9.00 ಗಂಟೆಯವರೆಗೆ ಬಾಲಭವನ ಸೊಸೈಟಿ ಸಹಯೋಗದೊಂದಿಗೆ **"ಉದ್ಯಾನವನದಲ್ಲಿ ಉದಯರಾಗ"** ಎಂಬ ಶೀರ್ಷಿಕೆಯಡಿ **ನಾಟ್ಯನಿನಾದ ನೃತ್ಯಾಲಯ ತಂಡದವರಿಂದ ಸಮೂಹ ನೃತ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

*****

## ಆಂಧ್ರ ಹಾಗೂ ಉತ್ತರಖಂಡದ ಉಪ ಸಭಾಧ್ಯಕ್ಷರಿಂದ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರ ಭೇಟಿ ಹಾಗೂ ವಿಚಾರ ವಿನಿಮಯ

**ಬೆಂಗಳೂರು, ಆಗಸ್ಟ 31 ( ಕರ್ನಾಟಕ ವಾರ್ತೆ ) :**

ಆಂಧ್ರಪ್ರದೇಶ ವಿಧಾನಸಭೆಯ ಉಪ ಸಭಾಧ್ಯಕ್ಷರಾದ ಕೋನಾ ರಘುಪತಿ ಹಾಗೂ ಉತ್ತರಾಖಂಡ ವಿಧಾನ ಸಭೆಯ ಸಭಾಧ್ಯಕ್ಷರಾದ ಶ್ರೀ ಪ್ರೇಮ ಚಂದ ಅಗರ್‌ವಾಲ್ ಅವರು 31–08–2019 ರಂದು ಕರ್ನಾಟಕಕ್ಕೆ ಅಧಿಕೃತ ಪ್ರವಾಸ ಕೈಗೊಂಡಿದ್ದು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ವಿಧಾನಸೌಧದ ಅವರ ಕೊಠಡಿಯಲ್ಲಿ ಭೇಟಿಮಾಡಿದರು.

ಆಂಧ್ರ ಪ್ರದೇಶದ ವಿಧಾನಸಭೆಯ ಉಪ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆಯಲ್ಲಿನ ಅರ್ಜಿಗಳ ಸಮಿತಿಯ ಕಾರ್ಯನಿರ್ವಹಣೆ ವಿಚಾರಗಳಿಗೆ ಸಂಬಂಧಪಟ್ಟಂತೆ ಸುದೀರ್ಘವಾಗಿ ಚರ್ಚಿಸಿದರ. ನಂತರ ವಿಧಾನಸಭೆ/ವಿಧಾನ ಪರಿಷತ್ತಿನ ಸಭಾಂಗಣಗಳನ್ನು ವೀಕ್ಷಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ತದನಂತರ ಉತ್ತರಾಖಂಡ ವಿಧಾನ ಸಭೆಯ ಸಭಾಧ್ಯಕ್ಷರು ಸಾರ್ವಜನಿಕ ಮಹತ್ವದ ವಿಷಯಗಳನ್ನು ಸಮಗ್ರವಾಗಿ ಚರ್ಚಿಸಲು ಅನುಕೂಲವಾಗುವಂತೆ ವಿಧಾನ ಸಭೆಯ ಅಧಿವೇಶನವನ್ನು ಹೆಚ್ಚು ದಿನಗಳ ಕಾಲ ನಡೆಸುವ ಕುರಿತು ಹಾಗೂ ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತಾಗಿ ಚರ್ಚಿಸಿ ವಿಚಾರ ವಿನಿಮಯ ಮಾಡಿಕೊಂಡರು.

ಈ ಭೇಟಿಯ ಎರಡೂ ಸಂದರ್ಭಗಳಲ್ಲಿ ವಿಧಾನಸಭೆಯ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.



